# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 262 (225)

ಸದಸ್ಯರ ಹೆಸರು : ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 18.08.2026

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಉತ್ತರ ಕರ್ನಾಟಕದಲ್ಲಿ ಅದರಲ್ಲೂ ಮುಖ್ಯವಾಗಿ ಚಿತ್ರದುರ್ಗ, ಕೊಪ್ಪಳ, ಬಾಗಲಕೋಟೆ-ವಿಜಯಪುರ ಜಿಲ್ಲೆಗಳಲ್ಲಿ ದಾಳಿಂಬೆ ಬೆಳೆಯು ಪ್ರಮುಖ ಬೆಳೆಯಾಗಿದ್ದು, ರಫ್ತು ಗುಣಮಟ್ಟದ ದಾಳಿಂಬೆ ಹಣ್ಣುಗಳನ್ನು ಬೆಳೆಯಲಾಗುತ್ತಿದ್ದು ಇತ್ತೀಚೆಗೆ ದಾಳಿಂಬೆ ಬೆಳೆಗೆ ದುಂಡಾಣು ರೋಗ, ಕೊಳೆ ರೋಗ ಸೊರಗು ಕಾಂಡಕೊರಕ ಕೀಟಗಳಿಂದ ರೈತರು ಹಾನಿ ಅನುಭವಿಸುತ್ತಿರುವುದು ಗಂಭೀರ ವಿಷಯವಾಗಿದ್ದು, ಈ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ: | ಗಮನಕ್ಕೆ ಬಂದಿದೆ |
| ಆ) | ಬಂದಿದ್ದಲ್ಲಿ, ಸಂಕಷ್ಟದಲ್ಲಿರುವ ದಾಳಿಂಬೆ ಬೆಳೆಗಾರರ ಆರ್ಥಿಕ ನೆರವಿಗಾಗಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು; | ದಾಳಿಂಬೆ ಬೆಳೆಗಾರರ ನೆರವಿಗೆ ಕೆಳಕಾಣಿಸಿದ ಕ್ರಮಕೈಗೊಳ್ಳಲಾಗಿದೆ.<br><br>1. ಈ ಬೆಳೆಗೆ ಬೀಳುವ ರೋಗ ಮತ್ತು ಕೀಟಗಳ ವಿವರ ಹಾಗೂ ನಿಯಂತ್ರಣೆಗೆ ಕೈಗೊಳ್ಳಬೇಕಾದ ಮಾರ್ಗೋಪಾಯಗಳನ್ನು ರೈತರಿಗೆ ತಲುಪಿಸಲು National Research Center on Pomegranate, Solapur ಹಾಗೂ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ವಿಜ್ಞಾನಿಗಳ ತಂಡವು ದಿನಾಂಕ:07.12.2024 ರಂದು |

| | | | |
|---|---|---|---|
| | | | ಬಾಗಲಕೋಟೆ ತಾಲ್ಲೂಕಿನ ಕಲಾದಗಿ ಗ್ರಾಮದ ದಾಳಿಂಬೆ ಬೆಳೆಯುವ ತಾಕುಗಳಿಗೆ ಭೇಟಿ ನೀಡಿ ಪರಿವೀಕ್ಷಣೆ ನಡೆಸಿ ತಾಕುಗಳಲ್ಲಿಯೇ ರೈತರಿಗೆ ಸಲಹೆ ಸೂಚನೆಯನ್ನು ನೀಡಲಾಗಿದೆ. ಸದರಿ ಕಾರ್ಯಕ್ರಮದಲ್ಲಿ ರೋಗಗಳ ಸಮಗ್ರ ನಿರ್ವಹಣೆಗಾಗಿ ನಾಟಿ, ಚಾಟನಿ ಪೂರ್ವ ಮತ್ತು ನಂತರದ ಸಮಯದಲ್ಲಿ ಅನುಸರಿಸಬೇಕಾದ ಕ್ರಮಗಳ ಕುರಿತು ವಿಸ್ತೃತವಾಗಿ ಚರ್ಚಿಸಿ ಸಮಗ್ರ ರೋಗ/ಕೀಟ ನಿರ್ವಹಣೆಯಿಂದ ರೋಗ ನಿರೋಧಕತೆ ಹೆಚ್ಚಿಸಿ ರೋಗದ ತೀವ್ರತೆಯನ್ನು ಕಡಿಮೆಗೊಳಿಸಬಹುದಾಗಿದೆ ಎಂದು ತಜ್ಞರು ಅಭಿಪ್ರಾಯ ವ್ಯಕ್ತ ಪಡಿಸಿರುತ್ತಾರೆ. ಸದರಿ ವಿಚಾರ ಸಂಕೀರ್ಣದಿಂದ ಸುಮಾರು 260 ರೈತರು ಸದುಪಯೋಗ ಪಡೆದುಕೊಂಡಿರುತ್ತಾರೆ. ಅಲ್ಲದೇ ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ರೈತರಿಗೆ ದಾಳಿಂಬೆ ಬೆಳೆಯ ನಿರ್ವಹಣೆ ಕುರಿತು ಮಾಹಿತಿಯನ್ನು ನೀಡುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br><br>2. ಸಮಗ್ರ ತೋಟಗಾರಿಕೆ ಅಭಿವೃದ್ಧಿ ಮಿಷನ್ (MIDH) ಯೋಜನೆಯಡಿ ಸಮಗ್ರ ಕೀಟ-ರೋಗ ನಿರ್ವಹಣೆಗ/ಸಮಗ್ರ ಪೋಷಕಾಂಶ ನಿರ್ವಹಣೆಯಡಿ ಜೈವಿಕ ಕೀಟನಾಶಕ/ಪೋಷಕಾಂಶಗಳು, ಜೈವಿಕ ಗೊಬ್ಬರ, ಸಾವಯವ ಗೊಬ್ಬರ, ಲಘು ಪೋಷಕಾಂಶ, Pheromone traps ಗಳಿಗೆ ಪ್ರತಿ ಹೆಕ್ಟೇರ್ ಗೆ ಘಟಕ ವೆಚ್ಚ ರೂ.5000 ರಲ್ಲಿ ಶೇ. 30 ರಂತೆ ಪ್ರತಿ ಪಲಾನುಭವಿಗೆ ರೂ. 1500 ರಂತೆ ಗರಿಷ್ಠ 2.00 ಹೆಕ್ಟೇರ್ ಪ್ರದೇಶಕ್ಕೆ ಸಹಾಯಧನ ನೀಡಲಾಗುತ್ತಿದೆ.<br><br>3. ಸಮಗ್ರ ತೋಟಗಾರಿಕೆ ಅಭಿವೃದ್ಧಿ ಮಿಷನ್ (MIDH) ಯೋಜನೆಯಡಿ ಪಕ್ಷಿ/ಕೀಟ/ಆಲಿಕಲ್ಲು ಗಳಿಂದ ಹಾನಿ ಉಂಟಾಗವುದನ್ನು ತಪ್ಪಿಸಲು ನಿರೋಧಕ ಬಲೆ ಬಳಸಲು ಘಟಕ ವೆಚ್ಚ ರೂ.50 ಪ್ರತಿ ಚ.ಮೀ. ರಲ್ಲಿ ಶೇ. 50 ರಂತೆ ಪ್ರತಿ ಪಲಾನುಭವಿಗೆ ರೂ.25 ಪ್ರತಿ ಚ.ಮೀ. ರಂತೆ ಗರಿಷ್ಠ 10,000 ಚ.ಮೀ. /ಫಲಾನುಭವಿಗೆ ಗರಿಷ್ಠ ರೂ. 2,50,000 ರ ವರೆಗೆ ಸಹಾಯಧನ ನೀಡಲಾಗುತ್ತಿದೆ. |

4. ಸಮಗ್ರ ತೋಟಗಾರಿಕೆ ಅಭಿವೃದ್ಧಿ ಮಿಷನ್ (MIDH) ಯೋಜನೆಯಡಿ ಹೊಸ ಪ್ರದೇಶ ವಿಸ್ತರಣೆ ಹಾಗೂ ನಿರ್ವಹಣೆ ಕಾರ್ಯಕ್ರಮದಡಿ ದಾಳಿಂಬೆ ಬೆಳೆಗೆ ಈ ಕೆಳಕಂಡ ಕೋಷ್ಟಕದಂತೆ ಪ್ರತಿ ಫಲಾನುಭವಿಗೆ ಗರಿಷ್ಟ 2 ಹೆಕ್ಟರ್ ಪ್ರದೇಶದವರೆಗೆ, ಶೇ. 40 ರಂತೆ ಎಲ್ಲಾ ವರ್ಗದ ರೈತರಿಗೆ ಸಹಾಯಧನ ನೀಡಲಾಗುತ್ತಿದೆ ವಿವರ ಕೆಳಗಿನಂತಿದೆ.

| ಕ್ರ.ಸಂ. | ಅಂತರ(Spacing) | ಘಟಕ ವೆಚ್ಚ (ರೂ. ಗಳಲ್ಲಿ) ಪ್ರತಿ ಹೆಕ್ಟೇರ್ ಗೆ | ಸಹಾಯಧನ (ರೂ. ಗಳಲ್ಲಿ) |
|---|---|---|---|
| 1 | 5X5 ಮೀ | 98,000 | 39,200 |
| 2 | 5X4 ಮೀ | 1,25,000 | 50,000 |
| 3 | 5X3 ಮೀ | 1,63,415 | 65,366 |
| 4 | 5X2.5 ಮೀ | 1,96,000 | 78,400 |
| 5 | 4.5X3 ಮೀ | 1,81,545 | 72,618 |

5. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಈ ಕೆಳಕಂಡಂತೆ ಸಹಾಯಧನ ನೀಡಲಾಗುತ್ತಿದೆ.

| ಕ್ರ.ಸಂ. | ಕಾರ್ಯಕ್ರಮ | ಘಟಕ ವೆಚ್ಚ (ರೂ. ಗಳಲ್ಲಿ) ಪ್ರತಿ ಹೆಕ್ಟೇರ್ ಗೆ | ಸಹಾಯಧನ (ರೂ. ಗಳಲ್ಲಿ) |
|---|---|---|---|
| 1 | ಲಘು ಪೋಷಕಾಂಶಗಳ ಮಿಶ್ರಣ ಮತ್ತು ಬೆಳೆಸ್ಪೆಷಲ್ ಸಹಾಯಧನ (Micronutrient Mixture/ Crop specials) | ರೂ. 8,000/- | ಶೇ. 25 ರಂತೆ ಪ್ರತಿ ಹೇಕ್ಟರ್ ಗೆ ರೂ.2000/- ಸಹಾಯಧನ<br>ಪ್ರತಿ ಪಲಾನುಭವಿಗೆ ಗರಿಷ್ಟ 1 ಹೆಕ್ಟೇರ್. |
| 2 | ಅ) 3HP ಯ ಸೋಲಾರ್ ಪಂಪ್ ಸೆಟ್ | ರೂ. 2.00 ಲಕ್ಷ | ಶೇ.50 ರಂತೆ ರೂ. 1.00 ಲಕ್ಷ |
| | ಆ) 5 HP & above ಸೋಲಾರ್ ಪಂಪ್ ಸೆಟ್ | ರೂ.3.00 ಲಕ್ಷ | ಶೇ.50 ರಂತೆ ರೂ.1.50 ಲಕ್ಷ ಸಹಾಯಧನ. |

| | | | |
|---|---|---|---|
| 3 | ಸ್ವಯಂ ಚಾಲಿತ ಹವಾಮಾನ ಮುನ್ಸೂಚನಾ ಘಟಕ (Automated weather stations) | ರೂ.40,000/- ಒಂದಕ್ಕೆ | ಪ್ರತಿ ಘಟಕಕ್ಕೆ ಶೇ.50ರಂತೆ ರೂ. 20,000/- ಗಳ ಸಹಾಯಧನ. ಪ್ರತಿ ಫಲಾನುಭವಿಗೆ ಗರಿಷ್ಠ 1 ಘಟಕ. |

6. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಕೋಯ್ಲೋತ್ತರ ನಿರ್ವಹಣೆ ಕಾರ್ಯಕ್ರದಡಿ ಪ್ಲಾಸ್ಟಿಕ್ ಕ್ರೇಟ್ಸ್/ ಕಾರೊಗೇಟೆಡ್ ಬಾಕ್ಸ್ ಗಳಿಗೆ ಪ್ರತಿ ಹೆಕ್ಟೇರ್ ಗೆ ರೂ. 35,000 ಘಟಕವೆಚ್ಚ ಇದ್ದು, ಶೇ.25 ರಂತೆ ರೂ. 8,750 ಗಳನ್ನು ಗರಿಷ್ಠ 2 ಹೆಕ್ಟೇರ್ ವರೆಗೆ ಸಹಾಯಧನ ನೀಡಲಾಗುತ್ತಿದೆ. ಫಾರ್ಮ್ ಗೇಟ್ ಗಳಿಗೆ (Farm Gate/ Pack house) ಗಳಿಗೆ ಘಟಕ ವೆಚ್ಚ ರೂ. 2,00,000/- ರಲ್ಲಿ ಶೇ.50 ರಂತೆ ರೂ. 1,00,000/- ಗಳಂತೆ ಸಹಾಯಧನ ನೀಡಲಾಗುತ್ತಿದೆ.

7. ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ಆವರಣದಲ್ಲಿ ದಾಳಿಂಬೆ ಉತ್ಕೃಷ್ಟ ಕೇಂದ್ರವನ್ನು ಸ್ಥಾಪಿಸಲಾಗಿದ್ದು, ದಾಳಿಂಬೆ ಬೆಳೆಗಾರರಿಗೆ ತರಬೇತಿ ನೀಡಲಾಗುತ್ತಿದೆ. ಇದುವರೆಗೆ 340 ರೈತರು ಹಾಗೂ 100 ಇಲಾಖೆಯ ಅಧಿಕಾರಿಗಳಿಗೆ ತರಬೇತಿ ನೀಡಲಾಗಿದೆ.
8. ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯು ಅಭಿವೃದ್ಧಿ ಪಡಿಸಲಾದ "ದಾರಕ್ಷಕ" ಮತ್ತು "ಟ್ರೈಕೋಕವಚ" ಎಂಬ ಜೈವಿಕ ಶೀಲಿಂಧ್ರ ನಾಶಕವು ಹಲವಾರು ಶೀಲಿಂಧ್ರ ನಾಶಕಗಳಾದ ಸ್ಯುಡೊಮೊನಾಸ್, ಟ್ರೈಕೊಡರ್ಮಾ, ಪ್ಯಾಸಿಲೋಮೈಸಿಸ್, ಕೈಟೊಸ್ಯಾನ್ ಮತ್ತು ಹೊಂಗೆಎಣ್ಣೆ ಹೊಂದಿದ್ದು ಪ್ರತಿ ಗಿಡಕ್ಕೆ 100 ಗ್ರಾಂ. ಗಳಂತೆ ರೈತರಿಗೆ ಬಳಸಲು ಉತ್ತೇಜನ ನೀಡಲಾಗುತ್ತಿದೆ.
9. ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ದಾಳಿಂಬೆ ತೋಟಗಳಲ್ಲಿ ಸಮರ್ಪಕ ನೀರಿನ ನಿರ್ವಹಣೆ ಮಾಡಲು ಎಲ್ಲಾ ವರ್ಗದ ರೈತರಿಗೆ 02 ಹೇಕ್ಟೇರ್ ವರೆಗೆ ಶೇ. 90 ರಷ್ಟು ಮತ್ತು 2 ರಿಂದ 5 ಹೆಕ್ಟೇರ್ ವರೆಗೆ ಶೇ. 45 ರಷ್ಟು ಸಹಾಯಧನ ನೀಡಲಾಗುತ್ತಿದೆ.

| | | |
|---|---|---|
| ಇ) | ನಿಂಬೆ ಅಭಿವೃದ್ಧಿ ನಿಗಮ, ತೆಂಗು ಅಡಿಕೆ ಅಭಿವೃದ್ಧಿ ನಿಗಮಗಳಂತೆ ಸರ್ಕಾರವು ದಾಳಿಂಬೆ ಅಭಿವೃದ್ಧಿ ನಿಗಮವನ್ನು ಕೂಡಾ ಪ್ರಾರಂಭಿಸಬೇಕೆಂದು ರೈತರ ಕೋರಿಕೆಯಂತೆ ದಾಳಿಂಬೆ ಅಭಿವೃದ್ಧಿ ನಿಗಮವನ್ನು ಸ್ಥಾಪನೆ ಮಾಡಲು ಸರ್ಕಾರ ಉದ್ದೇಶಿಸಿದೆಯೇ? | ದಾಳಿಂಬೆ ಅಭಿವೃದ್ಧಿ ನಿಗಮ ಸ್ಥಾಪನೆಯ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ. |

ಸಂಖ್ಯೆ: HORTI 429 HGM 2026

(ಎಸ್. ಎಸ್. ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು